ಕಡೆಯಿಂದ ಬರುವ ಅಭ್ಯರ್ಥಿಗಳನ್ನು ತಾವು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಆಯಾ ತಾಲ್ಲೂಕಿನವರನ್ನು ತೆಗೆದುಕೊಂಡು ಅಲ್ಲೇ ನೇಮಕ ಮಾಡಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾವು ಏನು ನೇಮಕ ಮಾಡುತ್ತೇವೆಯೋ ಆದರಲ್ಲಿ ಮೂರನೇ ಒಂದು ಅಂಶದಷ್ಟು ಡಾಕ್ಟರುಗಳು ರಿಪೋರ್ಟ್ ಮಾಡಿಕೊಳ್ಳುತ್ತಿಲ್ಲ. ಏಕೆಂದರೆ, ಅವರಿಗೆ ಪಟ್ಟಣ ಪ್ರದೇಶಗಳೇ ಬೇಕು. ಅದರ ಬಗ್ಗೆ ತಾವು ಏನು ಸೂಚನೆ ಕೊಟ್ಟಿದ್ದೀರಿ ಆದನ್ನು ಮಾರ್ಪಾಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕೋಡಿಯ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

113 (229) ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ, ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದವರ ಮುಂದಿದೆಯೇ;

ಆ)ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಪರಿವರ್ತನಾ ಕಾರ್ಯವನ್ನು ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು:– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಪರಿವರ್ತಿಸುವ ಕಾರ್ಯಕ್ರಮವಿದೆಯೇ ಎಂದು ನಾನು ಕೇಳಿರುವುದು. ಈ ಸಾರ್ವಜನಿಕ ಆಸ್ಪತ್ರೆಗೆ ಬಿಲ್ಡಿಂಗ್ ಕಟ್ಟಿಸುವ ಸಲುವಾಗಿ ಗೌರ್ನಮೆಂಟ್‌ನಿಂದ 80 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಆದರೆ ಉತ್ತರದಲ್ಲಿ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ಈ ಆಸ್ಪತ್ರೆಯ ವಿಸ್ತರಣೆಗೆ ಚಿಕ್ಕೋಡಿ ಮುನಿಸಿಪಾಲಿಟಿ ಕೌನ್ಸಿಲ್‌ನವರು ಸಹಿತಾ ಹಣ ಒದಗಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರದಿಂದ ಇದರ ಜೊತೆಗೆ 80 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಇಲ್ಲವೆಂದು ಹೇಳುತ್ತಿದ್ದಾರೆ. ಇದರಬಗ್ಗೆ ತಮಗೆ ಏನಾದರೂ ತಪ್ಪು ಮಾಹಿತಿ ಬಂದಿದೆಯೇ ? ಅಥವಾ ಇನ್ನೊಂದು ಸಾರಿ ಉತ್ತರ ತರಿಸಿಕೊಂಡು ಹೇಳುತ್ತೀರೋ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕೋಡಿಯಲ್ಲಿ 30 ಬೆಡ್ ಹಾಸ್ಪೆಟಲ್‌ನ್ನು 50 ಬೆಡ್‌ಗೆ ಅಪ್‌ಗ್ರೇಡ್ ಮಾಡಿದ್ದೇವೆ. The estimated cost for 50 beded Hospital is Rs. 72.71 lakhs. ಅದಕ್ಕಾಗಿ 72.81 ಲಕ್ಷ ರೂಪಾಯಿ ಮಂಜೂರಾಗಿದೆ. ಕರೆಂಟ್ ಇಯರ್ ಬಜೆಟ್‌ನಲ್ಲಿ 10.47 ಲಕ್ಷ ಪ್ರೊವೈಡ್ ಮಾಡಿದ್ದೇವೆ.ಅಲ್ಲಿ 2 ಮೆಡಿಕಲ್ ಆಫೀಸರ್ಸ್, 12 ಮೆಟರ್‌ನಿಟಿ ಬೆಡ್ಸ್, 18 ಜನರಲ್ ಬೆಡ್ಸ್ ಇದ್ದದ್ದನ್ನು, ಆದಷ್ಟು ಬೇಗನೆ 50 ಬೆಡ್ ಹಾಸ್ಪೆಟಲ್ ಆಗಿ ಪರಿವರ್ತನೆ ಮಾಡುತ್ತೇವೆ.

ಗ್ರಾಮಾಂತರ ಪ್ರದೇಶಗಳಿಂದ ಆಸ್ಪತ್ರೆಗಳ ಮಂಜೂರಾತಿಗಾಗಿ ವಂತಿಗೆ

114 (658) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-